# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಬಿಬಿಎಂಪಿ - ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 19/4/21

# ಕೊರೋನಾ ನಿರ್ವಹಣೆಗೆ ಬಿಬಿಎಂಪಿಗೆ ₹300 ಕೋಟಿ

ಕ.ಪ್ರ 19/4/21



ಬೆಂಗಳೂರು: ನಗರದಲ್ಲಿ ಕೋವಿಡ್
2ನೇ ಅಲೆ ನಿಯಂತ್ರಣ ಕಾರ್ಯಗ
ಳಿಗಾಗಿ ರಾಜ್ಯ ಸರ್ಕಾರವು
ಬಿಬಿಎಂಪಿಗೆ 300 ಕೋಟಿ ರು.
ಅನುದಾನ ಬಿಡುಗಡೆ ಮಾಡಿದೆ.

ಬಿಡುಗಡೆಯಾದ ಅನುದಾನ
ವನ್ನು ಕೋವಿಡ್ ನಿಯಂತ್ರಣ
ಕಾರ್ಯಗಳಿಗೆ ಹೊರ ಗುತ್ತಿಗೆ ಆಧಾರದಲ್ಲಿ
ನೇಮಿಸಿಕೊಂಡಿರುವ ವೈದ್ಯರು, ಅರೆ ವೈದ್ಯ
ಕೀಯ ಹಾಗೂ ಇತರೆ ಆರೋಗ್ಯ ಕಾರ್ಯಕರ್ತರಿಗೆ
ಸಂಭಾವನೆ ಪಾವತಿ, ಅಗತ್ಯ ಪರಿಕರಣಗಳ
ಖರೀದಿ, ಆ್ಯಂಬುಲೆನ್ಸ್ ಬಿಲ್ಲುಗಳ ಪಾವತಿ,
ಬಾಕಿ ಬಿಲ್ಲುಗಳ ಪಾವತಿಗೆ ಬಳಸಲು ಸರ್ಕಾರ
ಸೂಚಿಸಿದೆ.

ಅಲ್ಲದೆ ಆರ್‌ಟಿಪಿಸಿಆರ್, ರ‍್ಯಾಪಿಡ್ ಆ್ಯಂಟಿ
ಜನ್ ಟೆಸ್ಟ್ ಕಿಟ್‌ಗಳನ್ನು ಆರೋಗ್ಯ ಇಲಾಖೆಯ
ಡ್ರಗ್ ಲಾಜಿಸ್ಟಿಕ್ ಮತ್ತು ವೇರ್ ಹೌಸಿಂಗ್
ಸೊಸೈಟಿಯ ಮೂಲಕವೇ ಖರೀದಿ
ಸಬೇಕು. ತಾನು ಖರೀದಿಸುವ
ಇತರೆ ಯಾವುದೇ ಪರಿಕರಗಳ ದರ
ಈ ಸಂಸ್ಥೆಯು ಅಂತಹುದೇ
ಪರಿಕರಗಳಿಗೆ ನೀಡಿರುವ ದರಕ್ಕಿಂತ
ಹೆಚ್ಚಿರಬಾರದು. ಖರೀದಿ ಪ್ರಕ್ರಿಯೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ
ಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ
ಅನುಸಾರ ಇರಬೇಕು. ಪಾವತಿಸಿದ ಪ್ರತಿ
ಯೊಂದು ರಶೀದಿ, ಖರ್ಚಿಗೆ ಲೆಕ್ಕಪತ್ರಗಳ
ದಾಖಲೆ ನಿರ್ವಹಿಸಬೇಕು ಎಂದು ಸೂಚಿಸಲಾ
ಗಿದೆ. 2021-22ನೇ ಸಾಲಿನ ಎಸ್‌ಡಿಆರ್
ಎಫ್ ಅನುದಾನದ ಹೆಚ್ಚುವರಿ ಪಾಲಿನಲ್ಲಿ
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)
ವಿಭಾಗಕ್ಕೆ 300 ಕೋಟಿ ರು. ಅನುದಾನ ಬಿಡು
ಗಡೆ ಮಾಡಿದ್ದು, ಈ ಅನುದಾನವನ್ನು ಬಿಬಿಎಂ
ಪಿಗೆ ಬಿಡುಗಡೆ ಮಾಡಲು ಆದೇಶಿಸಿದೆ.